ಅವ್ವನ ಮಡಿಲಿನ್ಯಾಗ ಗದ ಗದ ನಡಗಿಕೊಂತ ಕುಂತಿದ್ದ ಭರ್ಮ ಅಲ್ಲಿಯ ವಾತಾವರಣವೆಲ್ಲಾ ಗಮನಿಸಿದ. ಅಲ್ಲಿ ನೆರೆದಿದ್ದ ಇಡೀ ಊರವರ ಒಬ್ಬೊಬ್ಬರ ಒಂದೊಂದು ಮಾತು ಕೇಳಿದ ಮ್ಯಾಲ 'ತಾನು ಗುಡ್ಯಾಗ ಹೋಗಿದ್ದ ದೊಡ್ಡ ತಪ್ಪು, ಪಾಪವಿರಬೇಕು' ಅಂತ ಅನಿಸತೊಡಗಿತು. ಬಸಪ್ಪ ಮಾಸ್ತಾರ ಇದೆಲ್ಲವನ್ನು ನೋಡಿಯೂ ಮೌನವಾಗಿ ಕುಳಿತುಕೊಂಡಿದ್ದು ಭರ್ಮನಿಗೆ ದೊಡ್ಡ ಅಚ್ಚರಿ ಆತು. 'ಮಕ್ಕಳಂದ್ರ ದೇವ್ರಿದ್ದಂಗ' ಎನ್ನುವ ಅವರ ಮಾತು ನೆನಪಿಗೆ ಬಂದು ಇವತ್ತೂ ಕೂಡ ಅದು ನಗಚಟಗಿ ಹಾಗೆಯೇ ಕಾಣಿಸ್ತು. ಗರ್ಭಗುಡಿಯಲ್ಲಿದ್ದ ಹನುಮಪ್ಪ ತನ್ನನ್ನು ಹೋಳುಗಣ್ಣಿನಲ್ಲಿ ನೋಡಿ ಮತ್ತೆ ಅತ್ತ ಮೂತಿ ತಿರುವಿದ ಹಾಗೆ ಭರ್ಮನಿಗೆ ಕಂಡುಬಂತು.

ಅಲ್ಲಿ ನೆರೆದಿದ್ದ ಮಂದ್ಯಾಗ ರಾಜಸ್ಥಾನಿಯವನೂ ನಿಂತಿದ್ದನ್ನು ಕಂಡ ಭರ್ಮನಿಗೆ ಒಮ್ಮೆಲೇ ಗೋಬಿ ನೆನಪಿಗೆ ಬಂತು. ಬಕ್ಕಣದಾಗ ಹಾಕ್ಕೊಂಡಿದ್ದ ಹನುಮಪ್ಪ ಗುಡಿಯ ಚಿಲ್ರೆ ಅದಾವ ಇಲ್ಲ ಅಂತ ಚಡ್ಡಿ ಮುಟ್ಕೊಂಡು ನೋಡಿದ. ಅವು ಝಣ್ ಝಣ್ ಅಂತ ಸಪ್ಪ ಮಾಡಿದ್ವು. ಭರ್ಮನಿಗೆ ನೋವು, ದುಃಖವೆಲ್ಲಾ ಮಾಯವಾಗಿ ಮುಖದ ತುಂಬಾ ಖುಷಿ ಆವರಿಸಿಕೊಳ್ತು. ರಾಜಸ್ಥಾನಿಯವ ಅಂಗಡಿಗೆ ಹೋಗೋದನ್ನೇ ಕಾಯ್ಕೊಂತ ಅವನ ಮೇಲೆಯೆ ದೃಷ್ಟಿ ನೆಟ್ಟ.

ಊರಿನ ಮುಖ್ಯಸ್ಥರಲ್ಲಿಯ ಒಬ್ಬಾವ 'ಗುಡಿ ಮುರ್ಚಿಟ್ ಆಗೇತಿ, ಅದನ್ನ ಸಾರಿಸಿ ತೊಳದು ಬಣ್ಣ ಹಚ್ಚಿ ಹೋಮ– ಹವನ ಮಾಡಿ ಪಾಪ ತೊಳೀಬೇಕು, ಅದಕ್ಕಾಗುವ ಖರ್ಚನ್ನ ಮೈಲೆಪ್ಪನ ಕೊಡಬೇಕು' ಅಂತ ಅಂದ್ರ, ಇನ್ನೊಬ್ಬಾವ, 'ಅದಕ್ಕ ಒಂದ ವಾರ ಟೈಮ್ ಕೊಡ್ತೀವಿ, ರೊಕ್ಕಾ ಹೆಂಗ್ ಜೋಡಿಸ್ತೀರಿ ಏನ್ ಮಾಡ್ತೀರಿ ಗೊತ್ತಿಲ್ಲ, ಇವತ್ತಿಗೆ ಎಂಟು ದಿನದೊಳಗ ಕೊಡಬೇಕು' ಅಂದ.

ಮತ್ತೊಬ್ಬಾವ, 'ಒಂದ್ ವ್ಯಾಳೆ ಕೊಡಾಕ ಆಗ್ಲಿಲ್ಲ ಅಂದ್ರ ಇಡಿ ಕೇರಿಯವ್ರು ಶಿಕ್ಷೆ ಅನುಭವಿಸಬೇಕಾಗತೈತಿ' ಅಂತ ಎಲ್ಲರಿಗೂ ಕೇಳುವಂಗ ಒದರಿದ. ಸಿದ್ಧನ ಹೆಂಡತಿ ಗಿರಿಜಾಳ ಬಾಯಿಯಿಂದ ಲೊಚ್ ಲೊಚ್ ಎನ್ನುವ ಶಬ್ದ ಹೊರ ಬಂತೇ ಹೊರತು ಭರ್ಮನ ಪರವಾಗಿ ಯಾವ ಮಾತೂ ಅವಳ ಗಂಟಲಿನಿಂದ ಹೊರ ಬರಲಿಲ್ಲ.

ಮಾದೇವಿ ತಲಿ ತಿರುಗಿ ಬೀಳುವುದೊಂದೇ ಬಾಕಿ. ಗ್ಯಾಸ್ ಸಿಲೆಂಡರಿಗಂತ ಕೂಡಿಟ್ಟಿದ್ದ ರೊಕ್ಕದಾಗ ಇನ್ನು ಒಂದ್ ರೂಪಾಯಿಯೂ ತನ್ನ ಕೈ ಸೇರುವುದಿಲ್ಲ ಅಂತ ನೆನಪಾಗಿ ದಳ ದಳ ಅಂತ ಕಪಾಳದ ತುಂಬಾ ಕಣ್ಣೀರು ಉದುರಿದ್ವು. ಬುಟ್ಟಿ, ಕಸಬರಗಿ ಹೆಣೆದಿದ್ದ ತನ್ನ ಅಂಗೈಗಳನ್ನು ನೋಡಿಕೊಂಡಳು. ಅವು ಚರ್ಮ ಕಿತ್ತುಬಂದು ಕಪ್ಪಗೆ ಒರಟೊರಟಾಗಿದ್ದವು. ಪಟ್ ಪಟ್ ಅಂತ ಒಂದೆರೆಡು ಹನಿಗಳು ಅವಳ ಅಂಗೈ ಮೇಲೆ ಬಿದ್ದಾಗ ತನ್ನ ಪಾಲಿಗೆ ದಕ್ಕಿದ್ದು ಇಷ್ಟೇ ಎಂದು ಸೆರಗಿನಿಂದ ಒರೆಸಿಕೊಂಡಳು. ಕೇರಿಯವರು ಮೈಲೆಪ್ಪನ ಕುಟುಂಬಕ್ಕ ತಾಕೀತು ಮಾಡತೊಡಗಿದ್ದರು. ಮೈಲೆಪ್ಪ ಮಾತ್ರ ಸಿಡ್ಲು ಹೊಡೆದವರಂಗ ಕಲ್ಲಾಗಿ ನಿಂತಿದ್ದ. ಫಕೀರ ತನ್ನ ಎಕ್ಸೆಲ್ ಗಾಡಿ ಮ್ಯಾಲ ಕುಂತುಕೊಂಡೇ ಈ ಪಂಚಾಯಿತಿ ಗಮನಿಸುತ್ತಿದ್ದುದು ಮೈಲೆಪ್ಪಗ ಕಾಣಿಸ್ತು. ಎಕ್ಸೆಲ್ ಗಾಡಿ ನೋಡಿದ್ ಕೂಡ್ಲೇ ಅವನ ಮನಸ್ಸು ಭಾಳ ಮರಗಕತ್ತಿತು.

ಮಾದೇವಿ ಮತ್ತು ಮೈಲೆಪ್ಪ ಇಬ್ಬರೂ ದುಃಖಿಸುತ್ತಿದ್ದನ್ನು ನೋಡಿದ ಭರ್ಮನಿಗೆ ಒಳಗೊಳಗೆ ಭಾಳ ಸಂಕಟವಾತು. ಬಕ್ಕಣದಾಗಿದ್ದ ಚಿಲ್ಲರೆ ಭಾರವಾದಂತನಿಸಿ ಅವುಗಳನ್ನು ತಾನು ಕಳುವು ಮಾಡಿದ್ದರಿಂದಲೇ ಊರವರು ಹಿಂಗೆಲ್ಲ ಆಡ್ತಿರಬಹುದು ಅನಿಸಿತು.

'ಎಷ್ಟು ದಂಡಾ ಕಟ್ಟೇಕ್ರಿ' ಅಂತ ಮಾದೇವಿ ಕೇಳಿದ್ಕ ಊರವರು ಲೆಕ್ಕ ಹಾಕತೊಡಗಿದರು.

ಇತ್ತ ಭರ್ಮ 'ಬಹುಶಃ ಆ ಚಿಲ್ಲರೆಗಳನ್ನು ಮತ್ತೆ ಗುಡಿಯೊಳಗಿಟ್ಟರೆ ಊರವರು ತಮಗೆ ಬಡಿಯುವುದು, ಬಯ್ಯುವುದು ನಿಲ್ಲಬಹುದು' ಎಂದುಕೊಂಡು, ಒಳಗೆ ಹೋದರೆ ಮತ್ತೊಂದಿಷ್ಟು ಏಟು ಬೀಳಬಹುದೆನಿಸಿ ನಿಂತಲ್ಲಿಂದಲೇ ಜೋರಾಗಿ ಬೀಸಿ ಹನುಮಂತ ದೇವರ ಗುಡಿಯೊಳಗೆ ಒಗೆದ. ಒಂದಿಷ್ಟು ಚಿಲ್ಲರೆಗಳು ಗಂಟೆಗೆ ಬಡಿದು ಢಣ್ ಎಂದರೆ, ಮತ್ತೊಂದಿಷ್ಟು ನೆಲಕ್ಕೆ ಗೋಡೆಗೆ ಬಡಿದು ಸದ್ದು ಮಾಡಿದವು. ತನ್ನ ಕೈಯಾರೆ ತಾನೆ ಗೋಬಿಯ ಚೂರುಗಳನ್ನು ದೂರ ಒಗೆದ ಅನುಭವವಾಗಿ ಅವನ ಕಣ್ಣುಗಳು ತುಂಬಿಕೊಂಡವು. ಊರವರೆಲ್ಲರೂ ಭರ್ಮನ ವರ್ತನೆಗೆ ಹೌಹಾರಿ ಗುಡಿ ಕಡೆಗೊಮ್ಮೆ ಅವನನ್ನೊಮ್ಮೆ ನೋಡತೊಡಗಿದರೆ, ಮಾದೇವಿ ಮೈಲೆಪ್ಪನಿಗೆ ಗಂಟಲು ಬಿಗಿದಂಗಾತು. ಗುಡಿಯೊಳಗಿನ ಹನುಮಂತ ದೇವರು ಭರ್ಮನನ್ನು ಹೋಳುಗಣ್ಣಿನಲ್ಲಿ ನೋಡಿ ಮತ್ತೊಮ್ಮೆ ಫಳ್ಳನೇ ನಕ್ಕ. ●